INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -2, March--April, 2024,
PageNo,16- 28
Peer -Reviewed, Refereed Journal

# ಪಶ್ಚಿಮ ಏಷ್ಯಾದ ಇರಾನಿನ ಸಾಮಾಜಿಕ ವ್ಯವಸ್ಥೆ

**ಡಾ.ಶಿವಾನಂದ.**[1]

ಭಾಷೆಯಲ್ಲಾಗಲಿ, ಸಂಸ್ಕೃತಿಯಲ್ಲಾಗಲಿ ಸಂಪೂರ್ಣವಾಗಿ ಅರಬೀಕೃತವಾಗಿರದಿದ್ದು ಗೆಲ್ಲುವುದರ ಮೂಲಕ ಇಸ್ಲಾಮಿಗೆ ಸೇರ್ಪಡೆಯಾದ ದೇಶಗಳಲ್ಲಿ ಇರಾನ್ ಮೊದಲನೆಯದು. ಇಂದು ಮತ್ತು ಹಿಂದೆಯೂ ಒಂದು ಸಮ್ಮಿಶ್ರ ಸಮಾಜವಿರುವ ದೇಶ ಆದರೆ ಅವಿಚ್ಛಿನ್ನ ಸಾಂಸ್ಕೃತಿಕ ಸಂಪ್ರದಾಯದ ಕಡೆಗೆ ಬಲವಾದ ಮತ್ತು ಪ್ರಜ್ಞಾಪೂರ್ವಕವಾದ ಒಲವು, ಪ್ರವೃತ್ತಿ ಅಲ್ಲಿ ಕಂಡುಬರುತ್ತದೆ. ಈ ಸಾಂಸ್ಕೃತಿಕ ಸಂಪ್ರದಾಯದೊಂದಿಗೆ ಈಗ ಇಸ್ಲಾಮಿನ ಒಂದು ಧಾರ್ಮಿಕ ಸಂಪ್ರದಾಯವೂ ಬೇರ್ಪಡಿಸಲಾಗದಂತೆ ಹೆಣೆದುಕೊಂಡಿದೆ. ಇರಾನಿನ ಪ್ರಸ್ತುತ ಇಸ್ಲಾಮಿಕ್ ಸಂಪ್ರದಾಯವನ್ನು ವಿಶ್ಲೇಷಣಾತ್ಮಕವಾಗಿ ಷೀಯಿಸಂ (Shiism) (ಷಿಯಾ ಪಂಥ) ಮತ್ತು ಸೂಫಿಸಂ (Sufism) (ಸೂಫಿ ಪಂಥ) ಎಂದು ಎರಡು ಅಂಗಗಳಾಗಿ ಒಡೆಯಬಹುದು. ಈ ಅಧ್ಯಾಯದ ಸಂದರ್ಭಕ್ಕೆ ಮೊದಲನೆಯದು ಮುಖ್ಯವಾದುದ್ದು. ಎರಡನೆಯದು ಗೌಣವಾದುದ್ದು. ಇರಾನಿನ ಅಧಿಕೃತವೂ ಸುಸ್ಥಾಪಿತವೂ ಆದ ಧರ್ಮವಾಗಿ ಷೀಯಿಸಂನ ಟ್ವೆಲ್ವರ್ (Twelver) ರೂಪವು ಪ್ರಧಾನವಾಗಿರುವುದರಿಂದ, ರಾಜಧಾನಿಯಾದ ಟೆಹರಾನ್, ಟ್ವೈಲ್ವರ್ಷಿಯಾ ಆಚಾರವಂತಿಕೆಯ ಭದ್ರ ಕೋಟೆಯಾಗುತ್ತದೆ. ಇಲ್ಲಿ ಚರ್ಚಿಸಲಿರುವ ನಗರ ಪರಿಸ್ಥಿತಿಯ ಸಂದರ್ಭ ಇದು. ಇನ್ನು ವರ್ಣಿಸಬೇಕಾಗಿರುವ ಗ್ರಾಮೀಣ ಪರಿಸ್ಥಿತಿ ಪೂರ್ವದಿಂದ ತೆಗೆದುಕೊಳ್ಳುವಂಥದು. ಅದೂ ಷಿಯಾ, ಕೊನೆಯದಾಗಿ ಬುಡಕಟ್ಟು ಮಾದರಿ ಆಗೇಯ ದಿಕ್ಕಿನಿಂದ ತೆಗೆದುಕೊಂಡದ್ದು, ಅಲ್ಲಿ ಬಲೂಚಿಗಳು ಹೆಚ್ಚು ಕಡಿಮೆ ಸಂಪೂರ್ಣವಾಗಿ ಸುನ್ನಿ (ಹನಫಿ)ಗಳು ಈ ವ್ಯತ್ಯಾಸವು ಅವರ ಸಾಂಸ್ಕೃತಿಕ ವಿಶಿಷ್ಟತೆಯ ಒಂದು ಒಳಅಂಗವಾಗಿದೆ.

ಮಾನವ ಶಾಸ್ತ್ರೀಯ ದೃಷ್ಟಿಯಿಂದ ಸುನ್ನಿ ಮತ್ತು ಷಿಯಾ ಪಂಥಗಳ ನಡುವಣ ವ್ಯತ್ಯಾಸಗಳು ನಿರ್ದಿಷ್ಟ ವಿನ್ಯಾಸವನ್ನು ಹೊಂದಿದ್ದು ಮೂಲತಃ ಭಾವನೆ ಮತ್ತು ನಿನ್ನೆಯ ವ್ಯತ್ಯಾಸಗಳು, ಅವು ಘರ್ಷಣೆಯ ಸನ್ನಿವೇಶಗಳಲ್ಲಿ ಅತ್ಯಂತ ಸ್ಪಷ್ಟವಾಗಿ ಕಂಡುಬರುತ್ತವೆ. (ಆದರಲ್ಲಿ, ಮತ್ತೆ ಮಾನವ ಶಾಸ್ತ್ರೀಯ ದೃಷ್ಟಿಯಿಂದ ಅವು ಪ್ರಧಾನ ಅಂಶಗಳಲ್ಲ; ಆದರೆ ಅದರಿಂದ ಉತ್ತೇಕ್ಷಿತವಾಗಿವೆ, ಸಮುದಾಯದ

[1].ಉಪನ್ಯಾಸಕರು, ಪಶ್ಚಿಮ ಏಷ್ಯಾ ಅಧ್ಯಯನ, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ,ಮೈಸೂರು.

ಧಾರ್ಮಿಕ ಜೀವನದಲ್ಲಿ ಸಂಭವಿಸುವ ಪರಿವರ್ತನೆಗಳು ಇವೆ. ಆದರೆ ಇವು ಗೌಣವಾದವು, ಸ್ಥಳದಿಂದ ಸ್ಥಳಕ್ಕೆ ಬೇರೆಬೇರೆಯಾಗುತ್ತವೆ. ಇರಾನಿನ ವಿವಿಧ ಪಂಗಡಗಳ ನಡುವೆ ಸಾಂಪ್ರಾದಾಯಿಕ, ಧರ್ಮಾಚರಣೆಯ ವ್ಯಾಪ್ತಿಯನ್ನು ಅದರಲ್ಲಿನ ವ್ಯತ್ಯಾಸಗಳನ್ನು ಕುರಿತು ನಡೆಸುವ ಯಾವುದೇ ಒಂದು ವಿಶ್ಲೇಷಣೆ, ಈಗ ಉಪಲಬ್ಧ ವಾಗಿರುವುದಕ್ಕಿಂತಲೂ ಹೆಚ್ಚಿನ ಐತಿಹಾಸಿಕ ಹಾಗೂ ಮಾನವ ಶಾಸ್ತ್ರೀಯ ಮಾಹಿತಿಯನ್ನು ಕೋರುತ್ತದೆ. ಆದರೆ ಈ ಕೆಳಗಿನ ನಿದರ್ಶನಗಳು ಬಹುಶಃ ಪ್ರಾತಿನಿಧಿಕವಾದವು. ಇರಾನಿನಲ್ಲಿ ಅಪಾರ ಬಹುಮತವಾಗಿರುವ ಬಲೂಚಿಗಳು, ಸುನ್ನಿ (ಹನಫಿ)ಗಳು, ಆದರೆ ಒಂದು ಬುಡಕಟ್ಟು ಮಾತ್ರ ಷಿಯಾ, ಈ ಬುಡಕಟ್ಟು ಇರುವ ಪ್ರದೇಶವು ಎಂದಿನಿಂದಲೂ ಷಿಯಾ ಪರ್ಷಿಯನ್ ಸೈನ್ಯಗಳು ಹಾದುಹೋಗುವ ಹಾಗೂ ಆಳುವವರು ಪ್ರಾಂತದೊಳಕ್ಕೆ ಬರುವ ಮಾರ್ಗದ ಅಂಚಿನಲ್ಲಿ ಇದೆ. ಕುರ್ದರ ಪ್ರಧಾನ ಸಮುದಾಯವು ಸುನ್ನಿ, ಆದರೆ ದಕ್ಷಿಣದಲ್ಲಿ ಕರ್ಮನ್ಶಾಹದ ಸುತ್ತ ಮುತ್ತ ಇರುವ ಕೆಲವು ಕುರ್ದಿಷ್ ಜನಾಂಗಗಳು ಷಿಯಾ. ಇವೂ ಮೆಸೊಪೊಟೋಮಿಯದ ಷಿಯಾ ಪವಿತ್ರ ಸ್ಥಳಗಳಿಗೆ ಹೋಗುವ ಮಾರ್ಗದಲ್ಲಿ ಇವೆ. ಅಲೆಮಾರಿಗಳು – ರೈತ್ಯರು ಇವರ ನಡುವೆ ಆಗಾಗ ಸಂಭವಿಸುವ ತಾತ್ವಿಕ – ಸಂಘರ್ಷದ ಜೊತೆಜೊತೆಗೆ ಸುನ್ನಿ–ಷಿಯಾ ವಿರೋಧವೂ ಕಂಡುಬರುತ್ತದೆ. ದಕ್ಷಿಣ ಕರಾವಳಿಯ ಮಧ್ಯವಲಯದಲ್ಲಿರುವ ಅರಬ್ ಸಮುದಾಯಗಳು ಸುನ್ನಿ (ಷಫೀತ್). ಇಲ್ಲಿ ಕುಲ ಸಂಬಂಧಿಯಾದ ತಾತ್ವಿಕ ಸಂಘರ್ಷಣದ ಜೊತೆಗೆ ಧಾರ್ಮಿಕ ಭಿನ್ನಾಭಿಪ್ರಾಯಗಳು ಸೇರಿಕೊಳ್ಳುತ್ತವೆ. ಈಶಾನ್ಯ ದಿಕ್ಕಿನಲ್ಲಿರುವ ಟರ್ಕರು ಇದೇ ಬಗೆಯ ನಿದರ್ಶನವಾಗುತ್ತಾರೆ. ದೇಶದಲ್ಲಿರುವ ಮುಸ್ಲಿಮೇತರ ಅಲ್ಪಸಂಖ್ಯಾತರೂ ಇಂಥವೇ ಕುಲಸಂಬಂಧಿಯಾದ, ಕೆಲವು ಸಂದರ್ಭಗಳಲ್ಲಿ ಭಾಷಾ ಸಂಬಂಧಿಯಾದ ಆಧಾರಗಳನ್ನು ಹೊಂದಿದ್ದಾರೆ (ಜೊರಾಸ್ಟ್ರಿಯನ್ ಸಮುದಾಯಗಳ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬಂದಿರುವುದರ ಕಾರಣಗಳು ಅಸ್ಪಷ್ಟವಾಗಿವೆ.' ಇರಾನಿಯನ್ 'ಸಮಾಜದಲ್ಲಿ ಸಮುದಾಯಗಳ ಮೂರು ಮೂಲ ಮಾದರಿಗಳಿವೆ: (1) ನಗರಗಳು (ಅಥವಾ ಪಟ್ಟಣಗಳು) 2) ಹಳ್ಳಿಗಳು ಮತ್ತು 3) ಸಂಚಾರೀ ಧರ್ಮಧಿಕಾರಿಗಳ ತಂಡಗಳು, ಈ ಬಗೆಗಳ ಹಂಚಿಕೆಗೆ ಬಹುಮಟ್ಟಿಗೆ ಪರಿಸರ ಸಂಬಂಧವಾದ ಪರಿಗಣನೆಗಳು ಆಧಾರವಾಗಿರುತ್ತವೆ, ಆದರೆ ಅವು ಪರಸ್ಪರ ಹೊರತಾಗಿಲ್ಲ. ಭೂಗೋಳ ವಿಜ್ಞಾನವನ್ನು ಕುರಿತ ಈಚಿನ ಕೃತಿಯೊಂದರಲ್ಲಿ (ಇಂಗ್ಲೀಷ್ 1966), ಈ ಮೂರು ಬಗೆಗಳನ್ನು ಹಿಂದೆ ಒಂದು ವಿಭಜನೆ (Trichotomy) ಎಂದು ತಪ್ಪಾಗಿ ತಿಳಿದುಕೊಳ್ಳಲಾಗಿತ್ತೆಂದೂ ಆದರೆ ಅದನ್ನು ಹಿನ್ನಾಡಿನ (hinterland) ಮೇಲೆ ನಗರವೊಂದು ಹೇರಿದ ಆರ್ಥಿಕ ಪ್ರಧಾನ್ಯದ ದೃಷ್ಟಿಯಿಂದ ನೋಡಬೇಕೆಂದೂ ಅಭಿಪ್ರಾಯ ಪಟ್ಟಿದೆ. ಈ ಎರಡೂ ಸೂತ್ರಗಳು ಅಸಮರ್ಪಕ ಎಂದು ಭಾವಿಸಲಾಗಿದೆ. ಅವುಗಳ ಬದಲಿಗೆ ಸೂಚಿಸುವುದು ಹೀಗೆ: ಸಮಾಜದ ಈ ಮೂರು ವರ್ಗಗಳು ಆಧ್ಯಾತ್ಮಿಕವಾಗಿ ಪಾರಸ್ಪರಿಕ ಸಂಬಂಧ

ಹೊಂದಿವೆ. (ಜನರು ಒಂದರಿಂದ ಇನ್ನೊಂದಕ್ಕೆ ಒಂದೇ ಸಮನೆ ಚಲಿಸುತ್ತಿದ್ದುದರ ಸೂಚನೆಗಳಿವೆ) ಮತ್ತು ಭಾವನಾತ್ಮಕವಾಗಿ ವಿಶಿಷ್ಟವಾಗಿವೆ. ಕೃಷಿ ಮತ್ತು ಪಶುಪಾಲನೆಗಳು ಒಂದೇ ಸಂಸ್ಕೃತಿ ಮತ್ತು ಒಂದೇ ಸಮಾಜದೊಳಗಿನ ಪರಸ್ಪರ ಪೂರಕ ಹೊಂದಾಣಿಕೆಗಳು, ಅವುಗಳ ನಡುವೆ ಭಾವನಾತ್ಮಕ ವಿರೋಧ ಇದ್ದರೆ ಅದು ಮಾನವ ಕುಲ ಸಂಬಂಧಿಯಾದ ವಾಸ್ತವಾಂಶವೇ ಹೊರತು ಒಂದು ವಿಶ್ಲೇಷಣಾತ್ಮಕ ಸತ್ಯವಾಗಿರಬೇಕೆಂಬ ನಿಯಮವೇನಿಲ್ಲ. ಅವು ಒಂದು ಆರ್ಥಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯಾಗುವುದಾದರೂ ಅವುಗಳಿಂದ ಬೇರೆಬೇರೆ ಸಮಾಜ ವ್ಯವಸ್ಥೆ, ಧಾರ್ಮಿಕ ಆಚರಣೆ ಮತ್ತು ಪ್ರಾತಿನಿಧ್ಯಗಳು ಮೇಲೇಳಲು ಅವಕಾಶವಾಗುತ್ತದೆ. ಈ ಅಧ್ಯಾಯದಲ್ಲಿ ಅವು ಒಂದೊಂದನ್ನು ಪ್ರತ್ಯೇಕವಾಗಿ ಪರಿಶೀಲಿಸಲಾಗಿದೆ. ಕೊನೆಯಲ್ಲಿ ಅವುಗಳ ನಡುವೆ ಇರುವ ನಿಕಟ ಸಂಬಂಧವು ಸ್ಪಷ್ಟವಾಗುತ್ತದೆಂದು ನಂಬಲಾಗಿದೆ.

ನಗರದಿಂದ ಹೊರಗೆ ನೋಡಿದರೆ, ಇರಾನಿಯನ್ ಸಮಾಜದಲ್ಲಿ ಮೂರು ಮೂಲಭೂತವಾದ ವರ್ಗಗಳಿವೆ. ಜಮೀನುದಾರ, ರೈತ (ಸಣ್ಣ ಹಿಡುವಳಿದಾರ ಮತ್ತು ಹಿನ್ನೆದಾರನೂ ಕೂಡಿದಂತೆ) ಮತ್ತು ಊರಿಂದೂರಿಗೆ ಸಂಚರಿಸುತ್ತಿರುವ ಧಾರ್ಮಿಕ ವ್ಯಕ್ತಿ. ಕೊನೆಯದಾಗಿ, ಸಾಂಸ್ಥಿಕ ವರ್ಗೀಕರಣ ಕಂಡುಬರುವುದಿಲ್ಲ. ಸಮಾಜ ವ್ಯವಸ್ಥೆಗೆ ಆಧಾರಭೂತವಾಗಿ ಅಸಮವಾದ ಅವಳಿ ಸಂಬಂಧಗಳ ಸರಪಳಿಗಳು ಮತ್ತು ಪಿರಿಮಿಡ್ಡುಗಳು ಕಂಡುಬರುತ್ತವೆ. ಕೆಲವು ಪರಿಸ್ಥಿತಿಗಳಲ್ಲಿ ಈ ಸಂಬಂಧಗಳನ್ನು ಸಾಂಸ್ಕೃಕರಿಸಲಾಗುತ್ತದೆ. ಉದಾ: ಬಸ್ತಾದ್ /ಶಾಗೆರ್ಡ್–ಒಡೆಯ/ ಕಲಿಯುವವನು. ಇದು ಬಜಾರಿನ ಒಳಗೂ ಹೊರಗೂ ವಿವಿಧ ವೃತ್ತಿಗಳಲ್ಲಿ ಮತ್ತು ವ್ಯಾಪಾರಗಳಲ್ಲಿ ಕಂಡು ಬರುವ ಮೂಲ ಸಂಬಂಧ ಮೊರೆದ್ ಮೊರ್ಷದ್ ಗುರು/ಶಿಷ್ಯ, ಸೂಫಿ ಪಂಥದಲ್ಲಿ ಇದು ಮೂಲಭೂತವಾದ ಸಂಬಂಧ: ಮಾಲೆಕ್ – ಜಮೀನುದಾರ/ರೈತ, ಇದು ಕೃಷಿ ವಲಯದಲ್ಲಿ ಕಾಣಬರುವ ಸಂಬಂಧ, ಇಲ್ಲಿ ಹೆಸರಿಸಿರುವ ಮಾದರಿಗಳಲ್ಲಿ ಒಂದೊಂದು ಒಂದು ವೃತ್ತಿ ವರ್ಗದ ಆಧಾರವನ್ನು ಉಳ್ಳದಾಗಿದೆ. ಅವುಗಳ ಶ್ರೇಣಿಕೃತ ಸಂಬಂಧವು ಸಾರ್ವಜನಿಕ ಮತ್ತು ಅನೇಕ ವೇಳೆ ಖಾಸಗಿ ಜೀವನದ ಎಲ್ಲ ಮುಖಗಳ ಮೂಲಕವೂ ವಿಸ್ತರಿಸುತ್ತದೆ. ಈ ಸಂಬಂಧವು ಆಧುನಿಕ ಹಾಗೂ ಸಾಂಪ್ರದಾಯಿಕ ಸಮಾಜವನ್ನು ವ್ಯಾಪಿಸುತ್ತದೆ. ಮಾಲೆಕ್ (ಜಮೀನುದಾರ) ಎಂಬ ಉಕ್ತಿಯ ಅರ್ಥವು ಭೂಸುಧಾರಣೆಯ ನಂತರ ವೇಗವಾಗಿ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿದೆ. ಇರಾನಿಯನ್ ಸಮಾಜದ ಈ ಲಕ್ಷಣವು ಸಂಕ್ಷಿಪ್ತವೂ ಸುಧಾರಣೀಕೃತವೂ ಆಗಿದ್ದರೂ ಕೆಳಗಿನ ಚರ್ಚೆಗೆ ಸಾಕಷ್ಟು ಮೇಲಿನ ಸಂದರ್ಭವನ್ನು ಪೂರೈಸುತ್ತದೆ.

**ನಗರ–ಸಮಾಜ**

ಸಾಂಪ್ರದಾಯಿಕವಾಗಿ ನಗರವು ಸರಕಾರದ ಅಥವಾ ವೈಸರಾಯಿಯ ಪೀಠ, ಯಾವಾಗಲೂ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅಲ್ಲದಿದ್ದರೂ ಸಾಂಸ್ಕೃತಿಕವಾಗಿ ಪ್ರಧಾನ್ಯ ಪಡೆದಿರುತ್ತದೆ. ಅದು ತನ್ನ ಮೂಲಧಾರವಾಗಿ ಹಳ್ಳಿಗಳನ್ನು ಪ್ಯಾಸ್ಟೋರಲ್ ಸಮುದಾಯಗಳನ್ನು ಒಳಗೊಂಡ ಹಿನ್ನಾಡು, ಸಾಂಪ್ರದಾಯಿಕವಾಗಿ ಸಂಚಾರೀ ಧರ್ಮಬೋಧಕರು ಕೂಡ, ಒಂದು ಕಡೆ ಸೇನಾಶಕ್ತಿಯ ಸಂಚಯವಾಗಿದ್ದರೆ,

ಇನ್ನೊಂದು ಕಡೆ ಭದ್ರತೆಗೆ ಒಡ್ಡಿದ ಅಪಾಯವೂ ಆಗಿದ್ದಾರೆ. ನಗರದಲ್ಲಿ ವಸತಿ ಸಂಕೀರ್ಣಗಳಿವೆ. ಒಂದೊಂದರಲ್ಲೂ ಒಂದು ಮಸೀದಿಯೂ ಇತರ ಸಾರ್ವಜನಿಕ ಕಟ್ಟಡಗಳೂ ಇರುತ್ತವೆ. ಅದು ಆ ಬಡಾವಣೆಯ ಸಾಮುದಾಯಿಕ ಜೀವನವನ್ನು ಆಧರಿಸಿರುತ್ತದೆ. ಈ ಕಾರಣದಿಂದಾಗಿಯೇ ಜನಾಂಗ ಮತ್ತು ಧಾರ್ಮಿಕ ಅಲ್ಪ ಸಂಖ್ಯಾತರು ತಮ್ಮ ತಮ್ಮ ವಸತಿ ಸಮುಚ್ಚಯಗಳನ್ನು ನಿರ್ಮಿಸಿಕೊಳ್ಳುವ ಒಲವು ಹೊಂದಿರುತ್ತಾರೆ. (Lapidus – ಇಂಗ್ಲೀಷ್) ಈ ಸಮುಚ್ಚಯವು ಸರಕಾರಿ ಮಿಲಿಟರಿ ಮತ್ತು ಧಾರ್ಮಿಕ ಮೆಟ್ಟಿಲುಗಳನ್ನು ಒಳಗೊಂಡು ಎಲ್ಲಕ್ಕೂ ಆರ್ಥಿಕವಾಗಿ ಬಜಾರ್ ಮೂಲಕ ಪೂರೈಕೆಯಾಗುತ್ತದೆ.

ಇಲ್ಲಿ ಟೆಹರಾನಿನ ಬಜಾರಿನ ಮೇಲೆ ಗಮನವನ್ನು ಕೇಂದ್ರೀಕರಿಸಿ, ನಗರದ ವಿನ್ಯಾಸವನ್ನು ಪರಿಶೀಲಿಸಲಾಗಿದೆ. ಏಕೆಂದರೆ, ಪೋರ್ಟರುಗಳು, ಕುಶಲಕರ್ಮಿಗಳು, ಸಣ್ಣಮಾರಾಟಗಾರರು. ಇವರುಗಳಿಂದ ಮೊದಲುಗೊಂಡು ಶ್ರೀಮಂತ ವರ್ತಕರು ಮತ್ತು ಸಗಟು ವ್ಯಾಪಾರಿಗಳವರೆಗೆ ಶ್ರಮ ಜೀವಿಗಳ ವೈವಿಧ್ಯವನ್ನು ಧಾರ್ಮಿಕವರ್ಗದ ಅತಿಮುಖ್ಯವಾದೊಂದು ವಿಭಾಗವನ್ನು ಅದು ಒಳಗೊಂಡಿದೆ, ಬಜಾರ್ ಒಂದು ಸಂಪೂರ್ಣ ಸಾಮಾಜಿಕ ಸಂಸ್ಥೆ, ಈ ಸಾಂಸ್ಥಿಕತೆಯನ್ನು ಧಾರ್ಮಿಕ ದೃಷ್ಟಿಯಿಂದ ನೋಡಲಾಗಿದೆ. ವಾಸ್ತವವಾಗಿ ಸಾಂಪ್ರದಾಯಿಕ ಧರ್ಮವೂ ಮಹಾ ಪರಂಪರೆಯ ಆದ ಇಸ್ಲಾಂ ಧರ್ಮವು ಬಜಾರಿನಲ್ಲಿ ಎಷ್ಟು ಸಮಗ್ರವಾಗಿದೆಯೆಂದರೆ, ಸಾಮಾಜಿಕ ಚಟುವಟಿಕೆಗಳ ಹೆಚ್ಚು ಕಡಿಮೆ ಎಲ್ಲಾ ನುಡಿಗಟ್ಟುಗಳಲ್ಲೂ ಅದು ಸ್ಪಷ್ಟವಾಗಿ ವ್ಯಕ್ತವಾಗಿದೆ. ಸಾಂಪ್ರದಾಯಿಕ ಧರ್ಮವಾದ ಇಸ್ಲಾಂ ಬಜಾರ್ ಸಮುದಾಯದ ತತ್ವ ಸಿದ್ಧಾಂತ, ಅತಿರೇಖ ರೂಪದಲ್ಲಿ, ಧಾರ್ಮಿಕ ವರ್ಗದ ನಾಯಕತ್ವದಲ್ಲಿ ಒಂದು ಶ್ರಮಜೀವಿ ಸಮೂಹವನ್ನು ಒಳಗೊಂಡು ಬಜಾರ್ ಸಮುದಾಯವು, ತನ್ನ ಪ್ರಗತಿಪರ ಅಂಶಗಳಿಗೆ ನೈತಿಕ ಅವಲಂಬನೆಯನ್ನು ಒದಗಿಸುತ್ತದೆ.

ಪರ್ಷಿಯನ್ ಸಮಾಜದಲ್ಲಿ ಚರ್ಚೆಗೂ ಸರಕಾರಕ್ಕೂ ಇರುವ ಸಂಬಂಧಕ್ಕೆ ಆಕಮೇನಿಯನ್ ಸಾಮಾಜ್ಯದ ಕಾಲದಿಂದಲೂ ಒಂದು ಸ್ವಾರಸ್ಯವಾದ ಇತಿಹಾಸವಿದೆ. ಸಸ್ಸೇನಿಯನ್ ಆಳ್ವಿಕೆಯಲ್ಲಿ ಎರಡೂ

ಕೂಡಿ ಒಂದೇ ಶ್ರೇಣಿಕೃತ ಸಂಸ್ಥೆಯಾಗಿತ್ತು. ಅರಬ್ ವಿಜಯವು ಸಹಜವಾಗಿಯೇ ಇರಾನಿನ ಸಾಂಸ್ಕೃತಿಕ ವಿಶಿಷ್ಟತೆಯನ್ನು (ನೂತನ) ಧರ್ಮವನ್ನು ಬೇರೆ ಬೇರೆ ಮಾಡಿತು. ಆಳುವ ಜಾತ್ಯತೀತ ರಾಜವಂಶಗಳಿಗೆ ಇಸ್ಲಾಮೀಕರಣವು ಧಾರ್ಮಿಕವಾದ ಒಂದು ಬಿಕ್ಕಟ್ಟನ್ನು ಉಂಟುಮಾಡಿತು. ಖಲೀಫತೆಯು ಇದ್ದಾಗ, ರಾಜರು ತಮ್ಮ ಜಾತ್ಯತೀತ ಆಡಳಿತಕ್ಕೆ ಖಲೀಫನ ಆಶೀರ್ವಾದವನ್ನು ಕೋರುತ್ತಿದ್ದರು. ಮಂಗೋಲರ ನಂತರ ಎರಡನೆಯ ರಾಷ್ಟ್ರೀಯ ಪುನರುಜ್ಜೀವನವು ಪುನಶ್ಚೇತನ ಚಳುವಳಿ ಎಂಬ ಸೋಗಿನಲ್ಲಿ ಪ್ರವರ್ತಿಸಿತು. ಸಫಾವಿದ್ ವಂಶವು ಒಂದು ಧಾರ್ಮಿಕ ಸಂಘಟನೆಯೊಳಗಿನಿಂದಲೇ ಮೂಡಿ ಬಂದಿತಾದರೂ, ತಮ್ಮ ಚಳುವಳಿಯನ್ನು ಸರಿಯಾಗಿ ನೆಲೆಗೊಳಿಸುವ ಸಲುವಾಗಿ ಅವರು ಧಾರ್ಮಿಕ ವಿದ್ವತ್ ವರ್ಗದ ಸ್ಥಾನಮಾನವನ್ನು ಉತ್ತೇಕ್ಷೆ ಮಾಡಿದರು. ಇದರ ಒಂದು ವಾಸ್ತವಿಕ ಫಲಿತಾಂಶ, ಧಾರ್ಮಿಕ ದೃಷ್ಟಿಯಿಂದ ನೋಡುವುದಾದರೆ, ನಿಜವಾದ ರಾಜ ಹನ್ನೆರಡನೆಯ ಇಮಾಂ ಈಗ ಮರೆಯಲ್ಲಿರುವವನು ಮುಂದೆ ಹೊರಬರಲಿರುವವನ್ನು, ಬರುವವರೆಗೂ ಅವನ ಗೈರುಹಾಜರಿಯಲ್ಲಿ ಮುಂದಿನ ರಾಜವಂಶಗಳು ನಿಭಾಯಿಸಿದ್ದು ಆಧುನಿಕ ಕಾಲದಲ್ಲಿ ಬಜಾರಿಗೂ ಆಡಳಿತಕ್ಕೂ ನಿರಂತರವಾದ ಸಂವಾದವಿದೆ. ಸಮಾಜದಲ್ಲಿ ವಿದೇಶೀ ಪ್ರಭಾವಕ್ಕೆ ಶಹಾ ಕೇಂದ್ರಬಿಂದುವಾದನು; ಬಜಾರ್ ಪರಕೀಯವಾದುದನ್ನು ದ್ವೇಷಿಸುತ್ತದೆ, ಸಾಂಪ್ರದಾಯಿಕ ಧರ್ಮದ ವ್ಯಾಖ್ಯಾನವನ್ನು ಅದು ಮುಖ್ಯವಾಗಿ ಎತ್ತಿಹಿಡಿಯುತ್ತದೆ. ಧಾರ್ಮಿಕ ವರ್ಗವೇ ಬಜಾರಿನ ಮುಖ್ಯ ವಕ್ತಾರ.

ಸಮೂಹ ಚಟುವಟಿಕೆಗಳಿಗಾಗಿ ಅತ್ಯಂತ ಮುಖ್ಯವಾದ ಸಂಸ್ಥೆ 'ಹೆಯಾತ್' (Heyat) ಬಜಾರಿನ ಸಾಮಾಜಿಕ ವ್ಯವಸ್ಥೆಯ ಸಂದರ್ಭದಲ್ಲಿ ಹೆಯಾತ್ಗಳು ಗಿಲ್ಡ್ (guilds)ಗಳಿಗೆ ಪೂರಕವಾದವು. ಅವು ಖಾಸಗಿ ನಿವಾಸಗಳಲ್ಲಿ ನಡೆಯುವ ಕಾಲಿಕ ಅನೌಪಚಾರಿಕ ಸಭೆಗಳು, ಸಾಮಾನ್ಯ ಸಾರ್ವಜನಿಕ ಹಿತಾಸಕ್ತಿಯಲ್ಲಿ ಅವು ಪಾತ್ರವಹಿಸಿದರೂ ಅವುಗಳ ಕಾರ್ಯಚಟುವಟಿಕೆ ಮುಖ್ಯವಾಗಿ ಧಾರ್ಮಿಕವಾದದ್ದು, ಹೊರಗೆ ಮಸೀದಿಯ ಔಪಚಾರಿಕ ವಾತಾವರಣವಿದ್ದರೂ, ಒಳಗೆ ಸಾಂಸ್ಥಿಕ ಚರ್ಚೆ ಮತ್ತು ಕಾರ್ಯಪ್ರವರ್ತನೆಗಳಿಗೆ ಏಕೈಕ ಅವಕಾಶ ಅಲ್ಲಿ ದೊರಕುತ್ತದೆ. ಅವುಗಳ ಸದಸ್ಯತ್ವವೂ ಬಜಾರ್ ಸಮುದಾಯದ ಅಡ್ಡಸೀಳಿಕೆಯ ಚಿತ್ರವನ್ನು ಕೊಡುತ್ತದೆ. ಬಜಾರಿನೊಳಗೆ ಗಿಲ್ಡುಗಳ ವ್ಯವಹಾರ ಕಡಿಮೆಯಾಗುತ್ತಾ ಹಯಾತ್ ಚಟುವಟಿಕೆ ಹೆಚ್ಚುತ್ತಿದೆ, ಅವುಗಳ ಸದಸ್ಯತ್ವಕ್ಕೆ ವೃತ್ತಿ ಅಥವಾ ವರ್ಗದ ವಿವರಣೆ ಅಗತ್ಯವಿಲ್ಲವಾದ್ದರಿಂದ ಅವು ಗಿಲ್ಡುಗಳಿಗಿಂತ ಮಿಗಿಲಾಗಿ ರಾಜಕೀಯ ಮತ್ತು ಆರ್ಥಿಕ ಒತ್ತಡಕ್ಕೆ ಗುರಿಯಾಗುತ್ತವೆ. ಅದೇ ಕಾರಣಕ್ಕಾಗಿಯೇ ಆಡಳಿತವೂ ಅವುಗಳನ್ನೇ ಹೆಚ್ಚಾಗಿ ಬಯಸಬಹುದು.

ವಸತಿ ಘಟಕವಾಗಿ ಬದಾರ್ ಕ್ರಮೇಣ ಕುಸಿಯುವುದು ಈ ಪ್ರಕ್ರಿಯೆಯನ್ನು ಅಧಿಕಗೊಳಿಸುವ ಸಾಧ್ಯತೆಯಿದೆ, ಬಜಾರಿನವರು ಹೊರಗೆ ಹೋದಾಗ ಇತರ ವರ್ಗಗಳೊಂದಿಗೆ ಸಂಪರ್ಕ ಪಡೆದು

ಪ್ರಭಾವಿತರಾಗುತ್ತಾರೆ. ಅದೇ ಸಮಯಕ್ಕೆ ತಮ್ಮ 'ವರ್ಗದಿಂದ ಪ್ರತ್ಯೇಕಿತರಾಗುತ್ತಾರೆ, ಸಾಂಪ್ರದಾಯಿಕವಾಗಿ ಬಂದಿದ್ದ ವಂಶೀಯ ಸಾಮಾಜಿಕ ಕ್ರಿಯೆಯ ಜಾಲವು ಕರಗುತ್ತದೆ ಅದನ್ನು ಮತ್ತೆ ಕಟ್ಟಬೇಕಾಗುತ್ತದೆ. ಧಾರ್ಮಿಕ ಬಲವಿನ ಮೇಲೆ ಈ ಪ್ರಕ್ರಿಯೆಯ ಪರಿಣಾಮಗಳನ್ನು ಇನ್ನೂ ಅಂದಾಜುಮಾಡಲಾಗಿಲ್ಲ. ಒಂದು ವಿಷಯ ಮಾತ್ರ ನಿಶ್ಚಿತ, ಸಮೂಹ ಸಂಪರ್ಕ ಮಾಧ್ಯಮದ ಪ್ರಭಾವ ಅಧಿಕವಾಗುತ್ತದೆ, ಬಜಾರಿನ ಧಾರ್ಮಿಕನಾಯಕರಿಗೆ ಜಾತ್ಯಾತೀತ ಪ್ರಭಾವವನ್ನು ಚಲಾಯಿಸುವುದು ಅವರಿಗೆ ಬಹಳ ಕಷ್ಟವಾಗುತ್ತದೆ, ಏಕೆಂದರೆ, ರೇಡಿಯೋ ಮತ್ತು ದೂರದರ್ಶನಗಳಲ್ಲಿ ಧಾರ್ಮಿಕವರ್ಗದ ಅತ್ಯಂತ ಪ್ರಗತಿಪರ ಭಾಗಗಳು ಮಾತ್ರ ಕಾಣಿಸಿಕೊಳ್ಳುತ್ತವೆ.

ಧಾರ್ಮಿಕ ಸಂಪ್ರದಾಯ ಹಾಗೂ ಸಾಮಾಜಿಕ ಕ್ರಿಯೆಗಳ ನಡುವಣ ಸಂಬಂಧವು ಅಷ್ಟು ನಿಕಟವಾಗಿರುವಾಗ, ಸಾಮಾಜಿಕ ಪರಿವರ್ತನೆಯು ಧರ್ಮದ ಮೇಲೆ ಪರಿಣಾಮವನ್ನುಂಟು ಮಾಡಲೇಬೇಕು. ನಿರ್ದಿಷ್ಟವಾಗಿ ಏಕಂದರೆ, ಧರ್ಮದ ವಿವರಣಕಾರರು ಧಾರಾಳವಾದ ಆರ್ಥಿಕ ಮತ್ತು ನೈತಿಕ ಶೋಷಣೆಯನ್ನು ಬಜಾರಿನಿಂದ ಪಡೆದರು, ಅಂತಹ ಸಂಬಂಧಗಳು ಏಕಪಕ್ಷೀಯವಲ್ಲ, ಬಜಾರಿಗೆ ಆದರದೇ ಒಂದು ಸಂಪ್ರದಾಯವಿದೆ ಅಥವಾ ವಿಶ್ಲೇಷಿಸಿ, ಸಂಪ್ರದಾಯವೆಂದು ಪರಿಗಣಿಸಬಹುದಾದು ಒಂದಿದೆ, ಅದು ಧಾರ್ಮಿಕ ಆಚರಣೆಯ ಎಲ್ಲಾ ಅಂಶಗಳ ಮತ್ತು ನಂಬಿಕೆಗಳ ಕುಲುಮೆಯಾಗುತ್ತದೆ, ವಿದ್ಯಾವಂತನಾದ ಆಚಾರವಂತ ಮೊಲ್ಲಾ ಅವುಗಳನ್ನು ನಿಜವಾದ ಧರ್ಮದಿಂದ ತೊಡೆದುಹಾಕಬಹುದು, ಆದರೆ ಹಾಗೆ ಮಾಡುವುದಿಲ್ಲ, ಬಜಾರಿನವರಿಗೆ ಅವರು ಸಾಂಪ್ರದಾಯಿಕ ಧರ್ಮದ ಭಾಗ

ಮೊಹರಂ ತಿಂಗಳ ಮೊದಲ ಹತ್ತು ದಿನಗಳ ಸಾಂಪ್ರದಾಯಿಕ ಆಚರಣೆಗಳಿಗೆ ಬಜಾರಿಗಳು ತೋರಿಸುವ ಬಲವಾದ ಮೋಹವು ಬಜಾರ್, ಸಂಪದಾಯದಲ್ಲಿ ಎದ್ದುಕಾಣುವ ಅಂಶ, ಮಹಾನ್ ಪರಂಪರೆಯ ಮುಖ್ಯ ಪ್ರವರ್ತಕರು ಅವುಗಳನ್ನು ಕೈಬಿಡಲು ಅಪೇಕ್ಷಿಸುತ್ತಾರೆ. ಬಜಾ ಒಂದು ಸಾಮಾಜಿಕ ಘಟಕವಾಗಿ ಕುಸಿದಾಗ ಒಟ್ಟು ಸಾಮಾಜಿಕ ಸನ್ನವೇಶವಾಗಿಯೂ ಅದು ಮುರಿಯಬೇಕು. ಮತೀಯ ತಳಹದಿಯ ಮೇಲೆ ವ್ಯವಸ್ಥೆಗೊಳ್ಳುವ ಮೊಹರಂ ಮೆರವಣಿಗೆಯ ಅತ್ಯಂತ ಅತಿರೇಕದ ರೂಪದಲ್ಲಿ ಇರುವ ಆಸಕ್ತಿಯೂ ಕ್ಷಯಿಸಲೇಬೇಕು, ಮುಖ್ಯ ಧರ್ಮದ ಪ್ರದರ್ಶಕರು ಬದಲಾದ ಸಮಾಜಕ್ಕೆ ಸಂಬಂಧಪಟ್ಟಂತೆ ಧರ್ಮವನ್ನು ಮನರ್ ರೂಪಿಸುವ ಪ್ರಕ್ರಿಯೆಯಲ್ಲಿ ಅನಿಬರ್ಂಧಿತವಾಗಿ ತೊಡಗಬಹುದು. ಪ್ರಸ್ತುತ ಕಾಲದಲ್ಲಿ ಮಹಾನ್ ಪರಂಪರೆಯು ಎರಡು ಶಕ್ತಿಗಳ ನಡುವೆ ಸಿಕ್ಕಿಕೊಂಡಿದೆ. ಒಂದು, ಸಾಂಪ್ರದಾಯಿಕ ಬಜಾರಿನ ಧಾರ್ಮಿಕ ಪತ್ಯೇಕತೆ, ಏಕೆಂದರೆ ರಾಜಕೀಯವಾಗಿ, ನೈತಿಕವಾಗಿ ಹಾಗೂ ಆರ್ಥಿಕವಾಗಿ ಅದಿಲ್ಲದೆ ಉಳಿಯದು, ಉಳಿಯಬಾರದು, ಎರಡನೆಯದು ಬಜಾರಿನ ಹೊರಗಿರುವ ನವಪೀಳಿಗೆಯೊಂದಿಗೆ ಸೇರಿಕೊಳ್ಳಲು ಮಾಡುವ ಹೋರಾಟ. ಹೆಯಾತ್ ಸಾಂಘಿಕ

ಕಾರ್ಯಚಟುವಟಿಕೆಯುಳ್ಳ ಒಂದು ಅನೌಪಚಾರಿಕ ಸಂಸ್ಥೆ, ಆದು ಹೊಸ ಹಾಗೂ ಹಳೆಯ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಧಾರ್ಮಿಕ ತಳಹದಿಯೊಂದಿಗೆ ಕೆಲಸಮಾಡುತ್ತದೆ. ಧಾರ್ಮಿಕ ವರ್ಗದ ಮೇಲೆ ಬಜಾರಿನ ಪ್ರಭಾವವು ಕೊನೆಗೊಳ್ಳುವುದರಿಂದ ಆ ವರ್ಗವು ಹಯಾತ್ ಮೂಲಕ ನೂತನ ಪರಿಸರದಲ್ಲಿ ಪುನ ಹಂಚಿಕೆಗೊಂಡ ಶ್ರಮಜೀವಿವರ್ಗದ ಮೇಲೆ ಪ್ರಭಾವ ಬೀರಲು ಅವಕಾಶವಾಗುತ್ತದೆ. ಈ ರೀತಿಯಾಗಿ ಒಂದು ಸಾಮಾಜಿಕ ಸಿದ್ಧಾಂತವಾಗಿ ಇಸ್ಲಾಂ ಮರುಜೀವದಾನ ಪಡೆಯಬಹುದು, ಬಜಾರ್ ವ್ಯವಸ್ಥೆಯು ಕ್ಷಯಿಸುವುದರಿಂದ ಸಮಾಜದ ಮೇಲಾಗುವ ಆರ್ಥಿಕ ಪರಿಣಾಮಗಳನ್ನು ಕೂಡ ಗಮನಕ್ಕೆ ತಂದುಕೊಳ್ಳಬೇಕು.

## ಗ್ರಾಮ ಸಮಾಜ :

ನಗರದಿಂದ ಹಳ್ಳಿಯ ಪರಿಸರಕ್ಕೆ ಹೋದರೆ ಅಲ್ಲಿ ಅತ್ಯಂತ ಮುಖ್ಯವಾದ ವ್ಯತ್ಯಾಸ ಕಂಡುಬರುವುದು ದೂರ ಮತ್ತು ಜನಸಂಖ್ಯಾ ಸಾಂದ್ರತೆಗಳಲ್ಲಿ, ಹಳ್ಳಿಯು ಪ್ರಜಾಯುತ. ಸಾಂಪ್ರದಾಯಿಕತೆಯಿರುವ ನಗರದಿಂದ ದೂರವಾಗಿರುತ್ತದೆ. ಜನಸಂಖ್ಯೆಯ ಲೆಕ್ಕ ಹಿಡಿದರೆ, ಮುಲ್ಲಾಗಳ ಸಂಖ್ಯೆಯು ಬಹುಶಃ ಕಡಿಮೆಯಿರಬಹುದು, ಒಂದು ವೇಳೆ ಹಾಗಿರದಿದ್ದರೂ, ಜನಸಾಂದ್ರತೆ ಹೆಚ್ಚಾಗಿಲ್ಲದ್ದರಿಂದ ಪ್ರತಿಯೊಬ್ಬ ಮುಲ್ಲಾನಿಗೂ ಇರುವ ಪ್ರಭಾವ ಕಡಿಮೆಯಾಗಿರುತ್ತದೆ. ಗ್ರಾಮೀಣ ಪರಿಸ್ಥಿತಿಯಲ್ಲಿ ಧರ್ಮವು ಬಜಾರಿಗಿಂತ ಕಡಿಮೆ ಪ್ರಮಾಣದಲ್ಲಿ ಪ್ರಜ್ಞಾಪೂರ್ವಕ ಸಿದ್ಧಾಂತವಾಗಿರುತ್ತವೆ.

ನಿರ್ದಿಷ್ಟ ಗಾತ್ರಕ್ಕಿಂತ (ದೇಶದ ವಿವಿಧ ಭಾಗಗಳಲ್ಲಿ ಇದು ಬೇರೆ ಬೇರೆಯಾಗುತ್ತದೆ) ದೊಡ್ಡದಾಗಿರುವ ಬಹುತೇಕ ಗ್ರಾಮಗಳಲ್ಲಿ ಒಂದು ಮಸೀದಿಯಿರುತ್ತದೆ. ಒಬ್ಬ ಮುಲ್ಲಾ ಇರುತ್ತಾನೆ. ಅವನು ಪ್ರಜ್ಞಾಪೂರ್ವಕವಾಗಿ ಸಾಂಪ್ರದಾಯಿಕ ಧರ್ಮವನ್ನು ಪ್ರತಿನಿಧಿಸುತ್ತಾನೆ. ನಗರದಲ್ಲಿರುವ ಪ್ರತಿಯೊಬ್ಬ ಮುಲ್ಲಾ ಹೆಚ್ಚಾಗೋ ಕಡಿಮೆಯಾಗೋ ಅಧ್ಯಯನ ಮಾಡಿರುತ್ತಾನೆ. ಅವಳು ಹಳಿಯಲ್ಲಿ ಹುಟ್ಟಿದವರಾಗಿರುವ ಸಾಧ್ಯತೆಯುಂಟು ಮತ್ತು ಹೊಟ್ಟೆಪಾಡಿಗಾಗಿ ಅವನು ತನ್ನ ಧಾರ್ಮಿಕ ಕಾರ್ಯಚಟುವಟಿಕೆಗಳನ್ನು ಅವಲಂಬಿಸಿ ಕೊಂಡಿರಬೇಕಾಗಿಲ್ಲ. ಸಾಮಾನ್ಯವಾಗಿ ಪೂರ್ವ ಇರಾನಿನಲ್ಲಿ ಕಣ್ಣಿಗೆ ಕಾಣಿಸುವ ಯಾವುದೇ ರೀತಿಯಲ್ಲೂ ಒಂದು ಸಂಸ್ಥೆಯಲ್ಲ, ಭೂಮಿಯು ಬಡೆತನ ಮತ್ತು ಗೇಣಿ ಹಕ್ಕುಗಳಿಂದಾಗಿ ಬಿಡಿಕುಟುಂಬಗಳಲ್ಲಿ ಹಂಚಿಕೆಯಾಗಿರುತ್ತದೆ. ಈ ಕುಟುಂಬಗಳು ಎತ್ತರವಾದ ಗೋಡೆಗಳು ಕಾಂಪೌಂಡುಗಳ ನಡುವೆ ಬಿಡಿಬಿಡಿಯಾಗಿ ವಾಸಮಾಡುತ್ತವೆ (ಇದು ಮಹಿಳೆಯರಿಗೆ ಕಟ್ಟುನಿಟ್ಟಾದ ಏಕಾಂತವನ್ನು ಒದಗಿಸುವ ಕ್ರಮ), ಬೇಸಾಯದ ಬಿಡಿಬಿಡಿ ಕಟ್ಟುಗಳು ಒಂದು ಅಖಂಡ ಪ್ರದೇಶವಾಗುತ್ತವೆ, ಅದರ ನಡುವೆ ಕಾಂಪೌಂಡುಗಳು ಒಂದು ಗಂಟಿನಂತೆ ಕೂಡಿಕೊಂಡಿರುತ್ತವೆ. ಈ

ಗಂಟು ಪ್ರದೇಶದ ಮಧ್ಯೆ ಇರಬಹುದು ಇಲ್ಲವೆ, ಒಂದು ತುದಿಯಲ್ಲಿ ಇರಬಹುದು. ಆದರೆ ಸಾಂಘಿಕ ಚಟುವಟಿಕೆಗಳಿಗೆ ಅವಕಾಶವಿಲ್ಲ, ಮಸೀದಿ ಹೊರತು ಬೇರೆಯಾಗಿ ಒಂದು ಸಭೆ ಸೇರುವಂತೆಯೂ ಇಲ್ಲ. ಷಿಯಾ ಆದ್ದರಿಂದ ಹಳ್ಳಿಗರು ಮಸೀದಿಗೆ ಹೋಗಲೇಬೇಕೆಂದು ಇಲ್ಲ.

ಆದ್ದರಿಂದ ಮಸೀದಿಯು ಒಂದು ಗ್ರಾಮದ ಸಾಂಸ್ಥಿಕ ಐಕ್ಯತೆಯ ಏಕೈಕ ಶಕ್ತಿಯನ್ನು ಪ್ರತಿನಿಧಿಸುತ್ತದೆ, ಆದರೆ ಆದರೆ ಯಶಸ್ಸು ನಿಲ್ಲುವುದು ಬಹುಮಟ್ಟಿಗೆ ಮುಲ್ಲಾನ ವ್ಯಕ್ತಿತ್ವ ಮತ್ತು ಪರಿಶ್ರಮದ ಮೇಲೆ ಬಜಾರಿನಲ್ಲಿನಂತೆಯೇ ಹಳ್ಳಿಯಲ್ಲೂ ಸಾಂಪ್ರದಾಯಿಕ ಧರ್ಮವು ಮೂಲಭೂತವಾದ ಸಾಮಾಜಿಕ ಸಂಬಂಧಗಳು ಮತ್ತು ಸಾಮಾಜಿಕ ನಿಯಂತ್ರಣಕ್ಕೆ ಅಗತ್ಯವಾದ ಕಾನೂನುಗಳನ್ನು ಒದಗಿಸುತ್ತದೆ. ಒಬ್ಬ ಬಲಶಾಲಿಯೂ ಕ್ರಿಯಾಶಾಲಿಯೂ ಆದ ಮುಲ್ಲಾನು ಈ ಪರಿಸ್ಥಿತಿಯನ್ನು ತನ್ನ ಮತ್ತು ಸಾಂಪ್ರದಾಯಿಕ ಧರ್ಮಕ್ಕಾಗಿ ಉಪಯೋಗಿಸಿಕೊಳ್ಳುತ್ತಾನೆ. ಆದರೆ ಅವನಲ್ಲಿ ಈ ಸಾಮರ್ಥ್ಯ ಇರುವ ಸಂಭವ ಕಡಿಮೆ, ಹಳ್ಳಿಯ ಜನತೆಯ ಬೇರೆ ಕೆಲವು ಅಂಶಗಳಿದ್ದು ಅವು ಸಾಂಪ್ರದಾಯಿಕ ಧರ್ಮದಲ್ಲಿ ಸ್ಥಾನ ಪಡೆದಿದೆ ಮತ್ತು ಪಕ್ಷಗಳಿಗೆ ಆಧಾರವನ್ನು ಒದಗಿಸುತ್ತದೆ. ಅವುಗಳಲ್ಲೊಂದರಲ್ಲಿ ಮುಲ್ಲಾನು ರಾಜಕೀಯವಾಗಿ ಅವೃತವಾಗಿರುತ್ತಾನೆ. ಇವು ಸಮುದಾಯದ ಆರ್ಥಿಕ ಗಣ್ಯ ವರ್ಗದ ಕೇಂದ್ರವೂ ಆಗಿರುತ್ತಾನೆ, ಅವರು ಹಾಜಿಗಳು ಮತ್ತು ಸಯ್ಯದರು.

ಹಳ್ಳಿಯಲ್ಲಿ ಸಾಂಪ್ರದಾಯಿಕ ಧರ್ಮದ ಪಾತ್ರವು ಸ್ಪಷ್ಟವಾಗಿ ಕಾಣಿಸುವುದು ಮೊಹರು ಮತ್ತು ರಂಜಾನ್ ತಿಂಗಳುಗಳಲ್ಲಿ (ಬಜಾರಿನಲ್ಲಿನಂತೆಯೇ), ಆಗ ಚಂದ್ರಶ್ಯಾಲೆಂಡರಿನ ಹಿಂದಿರುವ ಇತಿಹಾಸ ಮತ್ತು ತತ್ವದ ಪರಿಜ್ಞಾನ ಬೇಡಿಕೆಗೆ ಬರುತ್ತದೆ, ಮುಲ್ಲಾನ ಪ್ರಭಾವ ಆಗ ಅಧಿಕವಾಗುತ್ತದೆ. ಈ ಎರಡೂ ತಿಂಗಳುಗಳ ನಂಬಿಕೆಗಳು ಮತ್ತು ಆಚರಣೆಗಳು, ಸಮುದಾಯದ ಸಾಂಘಿಕತೆಯನ್ನು ಒತ್ತಿ ಹೇಳುತ್ತವೆ. ಎಲ್ಲರೂ ಅವುಗಳನ್ನೇ ಆಚರಿಸುತ್ತಿರುತ್ತಾರೆ ಎಂಬುದರಿಂದ ಮಾತ್ರವಲ್ಲ, ಅವುಗಳ ಹಿಂದಿರುವ ತತ್ವವು ಎಲ್ಲಾ ಮುಸ್ಲಿಮರ ಅಥವಾ ಎಲ್ಲಾ ಷಿಯಾಗಳ ಏಕತೆಯನ್ನು ಕೋರುತ್ತದೆಯಾದ್ದರಿಂದ, ಆದು ಹಳ್ಳಿಯನ್ನು ನಗರಕ್ಕೆ ಸಮೀಪಗೊಳಿಸುತ್ತದೆ ಕೂಡ. ಈ ಅವಧಿಯಲ್ಲಿ ಮುಲ್ಲಾರು ನಗರದಿಂದ ಹೊರಗೆ ತಮ್ಮಂಥವರ ಅಭಾವವಿರುವ ಕಡೆಗಳಿಗೆ ಪ್ರವಾಸ ಹೋಗುತ್ತಾರೆ.

ಗ್ರಾಮ ಸಂದರ್ಭದಲ್ಲಿ ಕಿರುಸಂಪ್ರದಾಯದಲ್ಲಿ ಎದ್ದು ಕಾಣುವ ಲಕ್ಷಣವನ್ನು ಸಮಾಧಿ ಮಂದಿರದ ಧರ್ಮ ಎಂದು ಹೇಳಬಹುದು. ಇರಾನಿಯನ್ – ಇಸ್ಲಾಮಿಕ್ ಸಂಸ್ಕೃತಿಯ ವಿಕಾಸಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಸಮಾಧಿಮಂದಿರವು ಸೂಫಿಸಂ ಒಂದಿಗೆ ನಿಕಟವಾಗಿ ಬೆಸೆದುಕೊಂಡಿದೆ. ವಿಶ್ಲೇಷಣೆಗೋಸ್ಕರವಾಗಿ ಸಮಾಧಿಮಂದಿರದ ಧರ್ಮವನ್ನು ಮಸೀದಿಯ ಧರ್ಮದಿಂದ ಪ್ರತ್ಯೇಕಿಸಿ

ನೋಡಬಹುದು, ಷಿಯಾ ಪಂಥದಿಂದ ಸೂಫಿ ಪಂಥವನ್ನು ಪ್ರತ್ಯೇಕಿಸಿ ನೋಡುವ ಹಾಗೆ, ಇರುನಿನ ಕಾವ್ಯವು ಗದ್ಯಕ್ಕಿಂತ ಹೆಚ್ಚು ಮಹತ್ವದ ಸಾಹಿತ್ಯಕ ಮಾಧ್ಯಮವಾಗಿದೆ. ಸೂಫಿಸಂ ಹಾಗೂ ಕಾವ್ಯ ಎರಡೂ ಐತಿಹಾಸಿಕವಾಗಿಯೂ ವರ್ತಮಾನದಲ್ಲೂ ಹೇಗೆ ನಿಕಟವಾಗಿ ಸಂಬಂಧಗೊಂಡಿವೆಯೆಂದರೆ ಒಂದನ್ನು ಬಿಟ್ಟು ಇನ್ನೊಂದನ್ನು ಅಧ್ಯಯನ ಮಾಡುವುದು ಸೂಕ್ತವಲ್ಲ. ಅಂತಿಮವಾಗಿ ಅಂಗೀಕರಿಸಿರುವುದು ಮತ್ತು ಸಾಂಪ್ರದಾಯಿಕ ಧರ್ಮದ ಸಂಕೇತವಾಗಿರುವುದು ಕುರಾನಿನ ಗದ್ಯ, ಇವು ಸಮಾಧಿ ಮಂದಿರಕ್ಕೂ ಮಸೀದಿಗೂ ನಡುವೆ ಇರುವ ಸಂಕೀರ್ಣ ಸಂಬಂಧದ ಕೆಲವು ಆಯವುಗಳಪ್ಪ, ದೈನಂದಿನ ವ್ಯಕ್ತಿಗತ ಧರ್ಮಾಚರಣೆಯ ರಂಗ ಮತ್ತು ಸಂದರ್ಭ ಸಮಾಧಿ ಮಂದಿರವಾಗಿದೆ. ಅಂದರೆ ಹರಕೆಗಳನ್ನು ಮಾಡಿಕೊಂಡು ಪ್ರಯೋಜನಗಳನ್ನು ಕೋರುವ ವ್ಯವಹಾರ, ಇದನ್ನು ವ್ಯಕ್ತಿಗತವಾಗಿ ನಡೆಸಲಾಗುತ್ತದೆ. ಅದೆಂದಿಗೂ ಸಾಂಘಿಕವಾಗುವುದಿಲ್ಲ, ಆದರೂ ಯಾವಾಗಲೂ ಸಾಂಪ್ರದಾಯಿಕ ಧರ್ಮಕ್ಕೆ ಸಂಬಂಧಿಸಿದಂತೆಯೇ ಅದನ್ನು ಚರ್ಚಿಸಲಾಗುತ್ತದೆ.

ಒಂದು ಹಳ್ಳಿಯ ಮಸೀದಿಯು ಗ್ರಾಮ ಮಸೀದಿ ಅಥವಾ ನಿರ್ದಿಷ್ಟ ಬಡಾವಣೆಯ ಹಲವು ಮಸೀದಿಗಳಲ್ಲಿ ಒಂದು, ಮಸೀದಿಗಳು ಎಂದಿಗೂ ಹಳ್ಳಿಗಳಿಂದ ಹೊರಗಿರುವುದಿಲ್ಲ (ಒಂದು ಹಳಿಯು ತೊರೆದ ಮಸೀದಿಯನ್ನು ಇನ್ನೊಂದು ಹಳ್ಳಿಯು ಉಪಯೋಗಿಸುತ್ತಿರಬಹುದಾದ ಸಂದರ್ಭ ಹೊರತು), ಆದರೆ ಸಮಾಧಿಮಂದಿರ ಅಥವಾ ಗೋರಿ ಹಾಗಲ್ಲ ಅದು ಎಲ್ಲಿ ಬೇಕಾದರೂ ನಿರ್ಮಿತವಾಗಿರಬಹುದು ಮಸೀದಿಗಳನ್ನು ಯಾವಾಗಲೂ ಮೂಲತಃ ಒಂದು ನಿರ್ದಿಷ್ಟ ಸಮುದಾಯದ ಮಸೀದಿಯಾಗಿರುವಂತೆ, ಅಥವಾ ಸಮುದಾಯದ ಭಾಗವಾಗಿರುವಂತೆ ಯೋಜಿಸಲಾಗಿರುತ್ತದೆ. ಒಂದು ಗೋರಿಯು ಯಾವುದೇ ಸಮುದಾಯದೊಂದಿಗೆ ವಾಚ್ಯವಾಗಿಯಾಗಲಿ ಸೂಚ್ಯವಾಗಿಯಾಗಲಿ ಯಾವ ಸಂಬಂಧವನ್ನು ಹೊಂದಿರುವುದಿಲ್ಲ. ಬೇರೊಂದು ಕಡೆ (1963) ಇರಾನಿನ ಸಮಾಧಿ ಮಂದಿರಗಳನ್ನು ಆರು ಬಗೆಯಾಗಿ ವಿಂಗಡಿಸಬಹುದೆಂದು ಸೂಚಿಸಲಾಗಿದೆ. ಮೊದಲನೆಯ ಮತ್ತು ಅತ್ಯಂತ ಮೂಲಭೂತವಾದ ವ್ಯತ್ಯಾಸವಿರುವುದು ಸಾಂಪ್ರದಾಯಿಕ ಧರ್ಮದೊಂದಿಗೆ ಸಂಬಂಧವು ಸ್ಪಷ್ಟವಾಗಿ ಕಾಣಿಸದಿರುವುದು ಮತ್ತು ಕೊನೆಯ ಪಕ್ಷ ತಕ್ಕಮಟ್ಟಿನ ಧಾರ್ಮಿಕ ಮೂಲವನ್ನು ಹೇಳಬಹುದಾದುದು ಇವುಗಳ ನಡುವೆ. ಮೊದಲಿನವು ವಿರಳ, ಆದರೆ ಇವೆ ಸಾಮಾನ್ಯವಾಗಿ ಪವಿತ್ರ ವ್ಯಕ್ತಿಗಳ ರೂಪದಲ್ಲಿ (ದೆರಖ್–ಎ–ಮೊರಾದ್–ದೇಹ್), ನಿರೀಕ್ಷಿಸಬಹುದಾದಂತೆ, ಇವು ಯಾವಾಗಲೂ ಯಾವುದಾದರೂ ದೃಷ್ಟಿಯಿಂದ ಅಸಾಮಾನ್ಯವಾಗಿರುವ ಮರಗಳು. ಒಂಟಿಯಾಗಿರಬಹುದು, ವಿಶೇಷತಃ ತುಂಬ ಎತ್ತರವಾಗಿರಬಹುದು ಅಥವಾ ಅಕ್ಕಪಕ್ಕದ ಮರಗಳಿಗಿಂತ ಬೇರೆಯೇ ಆದ ಜಾತಿಯದಾಗಿರಬಹುದು (ಜೊರಾಸ್ಟ್ರಿಯನ್ ಆಳ್ವಿಕೆಯಲ್ಲಿ ಮರಗಳನ್ನು ನೆಟ್ಟು ಬೆಳೆಸುವುದಕ್ಕೆ ತುಂಬ ಪ್ರಾಧಾನ್ಯ ಕೊಡಲಾಗಿತ್ತೆಂಬುದನ್ನು ಇಲ್ಲಿ

ಗಮನಿಸಬಹುದು). ಕಿರುಸಂಪ್ರದಾಯದ ಈ ಆಲಯ"ಗಳಿಗೆ "ಸಮಾಧಿ ಮಂದಿರ" ಎಂಬ ಪದವನ್ನು ಉಪಯೋಗಿಸುವುದಕ್ಕೆ ಮಾತೃಭಾಷೆಯ ಸಮರ್ಥನೆಯೂ ಇಲ್ಲದಿಲ್ಲ, ಬಗೆಬಗೆಯ ಮಂದಿರಗಳಿಗೆ ಉಪಯೋಗಿಸುವ ಆನೇಕ ದೇಶೀಯ ಪದಗಳಲ್ಲಿ ಹಲದಲ್ಲಿ ಸಮಾಧಿ", "ಗೋರಿ" ಎಂಬ ಅರ್ಥವಿದೆ, ಅವುಗಳಲ್ಲಿ ಒಂದು ಪದ ಎಮಾಮ್‌ಜಾದೇ (emamazadeh) ವ್ಯುತ್ಪತ್ತಿ ಶಾಸ್ತ್ರದಂತೆ ಇದರ ಅರ್ಥ "ಒಬ್ಬ ಇಮಾಮನಿಗೆ ಜನಿಸಿದವನು" ಎಂದಿದ್ದರೂ, ಅನೇಕ ಸಂದರ್ಭಗಳಲ್ಲಿ ವಿಶಿಷ್ಟ ನುಡಿಗಟ್ಟಾಗಿ ಉಪಯೋಗಿಸಲಾಗುತ್ತದೆ. ದೇಶದ ಕೆಲವು ಭಾಗಗಳಲ್ಲಿ ಯಾವುದಕ್ಕೆ "ಸಮಾಧಿ ಮಂದಿರ" ಎಂಬ (shrine) ಪದವನ್ನು ಬಳಸುತ್ತೇವೆಯೋ ಅವೆಲ್ಲವನ್ನು ಒಳಗೊಳ್ಳುತ್ತದೆ, ಅನೌಪಚಾರಿಕ ಧರ್ಮವು ಧರ್ಮದ ಹೆಸರಿನಲ್ಲಿ ವಿಚಾರಯುತವಾಗುವ ಇನ್ನೊಂದು ಉದಾಹರಣೆ ಇದು.

ಸ್ಪಷ್ಟವಾಗಿ ಇಸ್ಲಾಮಿಕ್ ಮೂಲವನ್ನು ಹೇಳುವ ಅನೇಕ ಸಮಾಧಿ ಮಂದಿರಗಳು ಸೂಕ್ಷ್ಮವಾಗಿ ಪರೀಕ್ಷಿಸಿದರೆ, ಅನುಮಾನಾಸ್ಪದವಾಗಿ ಕಾಣುತ್ತವೆ. ಉದಾಹರಣೆಗೆ, ಪ್ರವಾದಿಯ ಅಥವಾ ಯಾರಾದರೂ ಒಬ್ಬ ಇಮಾಮರ ಹೆಜ್ಜೆ ಗುರುತನ್ನು ಒಳಗೊಂಡ ಅಸಾಮಾನ್ಯ ಶಿಲೆಯೊಂದು ಅವುಗಳಲ್ಲಿ ಇರಬಹುದು ಅಥವಾ ಅದು ಒಂದು ನೀರು ನಿಲುಗಡೆಯಲ್ಲೂ ಉದ್ದವಾದ ಮರುಭೂಮಿಯ ಮಾರ್ಗದ ನಡುವೆಯೋ, ನೈಸರ್ಗಿಕ ರಮ್ಯವಾದ ಯಾವುದಾದರೂ ಒಂದು ತಾಣದಲ್ಲೋ ಇರಬಹುದು. ಏಕೆಂದರೆ ಅಂತಹ ರಮಣೀಯ ಸ್ಥಾನಗಳು ಅನೇಕ ಸಂಸ್ಕೃತಿಗಳಲ್ಲಿ ದೈವಶಕ್ತಿಗಳ ನೆಲೆಯೆಂದು ಭಾವಿಸಲಾಗುತ್ತದೆ. ಇವುಗಳನ್ನು ಯಾವನಾದರೂ ಒಬ್ಬ ಪೌರಾಣಿ ವೀರನ ಹೆಸರಿನಿಂದ ಕರೆಯಲಾಗುತ್ತದೆ, ಪ್ರವಾದಿ ಕೆಜರ್ ಹಾಗ, ಏನೇ ಇರಲಿ, ಮಂದಿರಗಳಲ್ಲಿ ಹೆಚ್ಚಿನ ಸಂಖ್ಯೆಯವು ಐತಿಹಾಸಿಕ ವ್ಯಕ್ತಿಗಳ ಸಮಾಧಿಗಳು, ಅವರು ಪ್ರವಾದಿಯೊಂದಿಗೆ ಸಂಬಂಧ ಪಟ್ಟಿದುದರಿಂದಲೋ, ತಮ್ಮ ಜೀವನದ ಪಾವಿತ್ರ್ಯದಿಂದಲೋ, ಅಥವಾ ತಾವು ಬದುಕಿದ್ದ ಸಮುದಾಯದಲ್ಲಿ ನಡೆದಿದ್ದ ಆಕರ್ಷಕ ವ್ಯಕ್ತಿತ್ವದಿಂದಲೋ ಮರಣಾ ನಂತರ ಜನರ ಭಕ್ತಿಯನ್ನು ಆಕರ್ಷಿಸಿದವರು,"

ಸಮಾಧಿ ಮಂದಿರಗಳ ಮೂಲವನ್ನು ಹೀಗೆ ವಿವೇಚಿಸಿದ ಮೇಲೆ ಅವು ಹೇಗೆ ಹರಡಿಕೊಂಡಿವೆಯೆಂಬುದನ್ನು ನೋಡಬಹುದು. ದೂರದೂರದ ಚಿಲುಮೆಗಳ ಬಳಿ, ದಟ್ಟ ನೆರಳಿರುವ ಸ್ಥಳಗಳು ಇತ್ಯಾದಿ. ವಸತಿ ನೆಲೆಗಳ ವಿನ್ಯಾಸ ಮತ್ತು ಸಂಪರ್ಕ ಹಾಗೂ ಸಮಾಧಿ ಮಂದಿರಗಳ ಹಂಚಿಕೆ ಇವುಗಳ ನಡುವೆ ನೇರ ಸಂಬಂಧವು ಇಲ್ಲಿಗೆ ನಿಲ್ಲುವುದಿಲ್ಲ. ಈ ಬಗೆಯ ಮಂದಿರಗಳಲ್ಲಿ ಯಾವುದನ್ನೂ ಸಮೂಹ ಚಟುವಟಿಕೆಯಾಗಿ ಪ್ರಜ್ಞಾಪೂರ್ವಕವಾಗಿ ನಿರ್ಮಿಸಿಲ್ಲ. ಸಂದರ್ಶಕರು ವೈಯುಕ್ತಿಕವಾಗಿ ಗಮನಕೊಡುತ್ತಾ ಕ್ರಮೇಣ ಬೆಳೆಯುತ್ತವೆ. ಕಟ್ಟಡಗಳಿದ್ದರೆ ಅದನ್ನು ವ್ಯಕ್ತಿಯು ಹರಕೆಯಾಗಿ (ನಜರ್)

(nazar) ಅಥವಾ ಉಯಿಲಿನಂತೆ (ವಕ್ತ್) (vaqt) ನಿರ್ಮಿಸಲಾಗಿರುತ್ತದೆ. ಒಂದು ಪ್ರದೇಶದ ವಿವಿಧ ಮಂದಿರಗಳ ಸಾಫಲ್ಯ – ವೈಫಲ್ಯಗಳು ಅಲ್ಲಿಯ ವಸತಿ ನೆಲೆಗಳ ಹಾಗೂ ಸಂಪರ್ಕದ ವಿನ್ಯಾಸದ ಮೇಲೆ ಪರಿಣಾಮವನ್ನುಂಟು ಮಾಡುತ್ತವೆ. ಒಂದು ಸ್ಪಷ್ಟವಾದ ನಿದರ್ಶನವನ್ನು ನೋಡುವುದಾದರೆ ಮಶ್ರದ್ ನಗರವು ಆ ಸ್ಥಳದಲ್ಲಿ ಇರುವುದಕ್ಕೆ ಕಾರಣ, ಅದಕ್ಕೆ ಆ ಹೆಸರು ನೀಡಿದ ಸಮಾಧಿಯು ಆ ಸ್ಥಳದಲ್ಲಿ ಇರುವುದು.

ಧರ್ಮಕ್ಕೆ ಇರುವ ಎರಡು ಪರ್ಷಿಯನ್ ಪದಗಳಿಗೆ (ದಿನ್, ಮಝೂಟ್–Din Mathad) ಇರುವ ಅರ್ಥ ಸಾಮಾನ್ಯ ಬಳಕೆಯಲ್ಲಿ ಮುಲ್ಲಾ, ಮಸೀದಿ, ಹಾಜಿಗಳು ಮತ್ತು ಸಯ್ಯದರು ಪ್ರತಿನಿಧಿಸುವ ಸಾಂಪ್ರದಾಯಿಕ ಧರ್ಮ, ಇವರಲ್ಲಿ ಮುಲ್ಲಾ ತನ್ನ ಸ್ಥಾನವನ್ನು ತಜ್ಞ ವ್ಯಖ್ಯಾನಕಾರನಾಗಿ ಉಪಯೋಗಿಸಿಕೊಳ್ಳುತ್ತಾನೆ. ಅವನು ನಗರದಲ್ಲಿ ತರಬೇತಿ ಪಡೆದವನಾದ್ದರಿಂದ ನಗರವು ಧಾರ್ಮಿಕ ಶಿಕ್ಷಣದ ಕೇಂದ್ರವಾಯಿತು. ಹಾಗಾಗಿ ಪ್ರಜ್ಞಾಪೂರ್ವಕ ಧರ್ಮವು ನಗರದ ಧರ್ಮವಾಯಿತು. ಹಳ್ಳಿಗೆ ಸ್ಥಳೀಯ ಮುಲ್ಲಾನ ಮೂಲಕ ನಗರದಿಂದ ಧರ್ಮದ ಅಗತ್ಯದ ಪೂರೈಕೆಯಾಗುತ್ತಿತ್ತು. ಮೊಹರಂ ಮತ್ತು ರಂಜಾನ್ ಈ 'ಪವಿತ್ರ' ಮಾಸಗಳಲ್ಲಿ ನಗರದಿಂದ ಸಂಚಾರ ಹೊರಟು ಬರುತ್ತಿದ್ದ ಮುಲ್ಲಾಗಳು, ಪ್ರವಾಸಿ ಹಾಜಿಗಳು, ಸಾಂಪ್ರದಾಯಿಕ ಧರ್ಮವನ್ನು ಹಳ್ಳಿಗೆ ಒದಗಿಸುತ್ತಿದ್ದರು. ಸಮಾಧಿ ಮಂದಿರದ ಧರ್ಮವಾದಲೋ ಹಳ್ಳಿಗಳಿಗೆ ಸೇರಿದುದು, ಆದರೆ ಅವು ನಗರದಲ್ಲೂ ಇರಬಹುದು. ಆದರೆ ನಗರದಲ್ಲಿ ಅದಕ್ಕಿಂತ ಪ್ರಖರವಾದ ಸಾಂಪ್ರದಾಯಿಕ ಧರ್ಮವು ಅದನ್ನು ಮುಸುಕಿಬಿಟ್ಟಿರುತ್ತದೆ. ನಗರವಾಸಿಗಳು ಸಮಾಧಿ ಮಂದಿರ ಧರ್ಮವನ್ನು ಆಚರಿಸಬೇಕೆಂದರೆ, ನಗರದಿಂದ ಹೊರಗೆ ಸಾಮಾನ್ಯವಾಗಿ ಗ್ರಾಮ ಪರಿಸರದಲ್ಲಿರುವ ಮಂದಿರಗಳಿಗೆ ಬರುತ್ತಾರೆ.

ಸಮಾಧಿ ಮಂದಿರ ಧರ್ಮವು ಅತ್ಯಂತ ಮುಖ್ಯವಾಗಿರುವುದಾದರೂ ಅನೌಪಚಾರಿಕ ಧರ್ಮ ಎಂಬ ಶೀರ್ಷಿಕೆಯಲ್ಲಿ ಅಡಕವಾಗುವುದು ಅದೊಂದೇ ಅಲ್ಲ. ನಂತರ ಸಾಮಾನ್ಯವಾಗಿ ಸೂಫಿಗಳ ಗೋರಿಗಳು ಸಮಾಧಿ ಮಂದಿರಗಳಾಗಿ ಬೆಳೆಯುತ್ತವೆ. ಅವು ವಿರಳ ಮತ್ತು ಬಹು ದೂರದೂರಕ್ಕೆ ಹರಡಿಕೊಂಡಿರುವವು, ಹೀಗೆ ಅನೌಪಚಾರಿಕ ಧರ್ಮವನ್ನು ಸಾಮಾನ್ಯವಾಗಿ ಆಚರಿಸುವವನು ಡೋಆನೆಸ್ (doanenis) ಪ್ರಾರ್ಥನೆಗಳ ಲೇಖಕ, ರಕ್ಷಕ ಮಂತ್ರಗಳನ್ನು ಬರೆಯುವವನು, ಒಂದು ಮಂದಿರಕ್ಕೆ ಏತಕ್ಕಾಗಿ ಹೋಗುವರೋ ಅದೇ ಉದ್ದೇಶಕ್ಕಾಗಿ ಅವನ ಬಳಿಗೆ ಜನರು ಹೋಗಬಹುದು ಮತ್ತು ಅವನು ಯಾವುದಾದರೊಂದು ಮಂದಿರಕ್ಕೆ ಸಂಬಂಧಪಟ್ಟ ಇರಬಹುದು, ಅವನು ರಚಿಸುವ ಪೀಡಾಪರಿಹಾರಕ ಮಂತ್ರಗಳ ಉದ್ದೇಶ ಕೆಟ್ಟಕಣ್ಣಿಗೆ ಪ್ರತಿಯಾಗಿ ರಕ್ಷಣೆ ಕೊಡುವುದು, ಕೆಟ್ಟದೃಷ್ಟಿ ಎನ್ನುವುದೂ ಅನೌಪಚಾರಿಕ

ಧರ್ಮದ ಒಂದು ಅಂಶ. ವೈಯುಕ್ತಿಕ ದುರದೃಷ್ಟಕ್ಕೆ ಒಂದು ತಾತ್ವಿಕ ವಿವರಣೆಯನ್ನು ಅದು ಕೊಡುತ್ತದೆ. ಅದು ದುರದೃಷ್ಟದ ಮೂರ್ತರೂಪ ಅಥವಾ ಅದಕ್ಕೆ ನೀಡಿದ ಮನಶ್ಯಾಸ್ತ್ರೀಯ ನುಡಿಗಟ್ಟು, ಇದು ಹೊರಗಿನವರಿಂದ ಅಪಾಯದ ಹೆದರಿಕೆ ಮತ್ತು ಅವರ ಅಸೂಯೆಗಳಿಗೆ ಸಂಬಂಧಪಟ್ಟ ಭೀತಿ, ಇಂತಹ ಹೆದರಿಕೆಯು ವಿಶೇಷವಾಗಿ ವ್ಯಕ್ತವಾಗುವುದು ಜನನ, ಸುನತಿ ಮತ್ತು ವಿವಾಹ ಇಂತಹ ಆಚರಣೆಗಳಲ್ಲಿ ಅದು ವೈಯುಕ್ತಿಕ ಧರ್ಮದ ಪರಿಕಲ್ಪನೆಯಾದರೂ ಸಾಂಪ್ರದಾಯಿಕ ಧರ್ಮವಾಗಿ ರೂಢಿಸಲಾಗಿದೆ. ಈ ಪರಿಸ್ಥಿತಿಯಲ್ಲಿ ರಾಜಧಾನಿಯಿಂದ ಮೂಡಿಬರುವ ಪಾಶ್ಚಾತ್ರೀಕರಣ ಪ್ರಕ್ರಿಯೆಯು ಪ್ರಗತಿಗೊಂಡ ಹಾಗೆ ಸಂಸ್ಕೃತಿ ಬದಲಾವಣೆಯಾಗುವುದನ್ನು ನಾವು ನೋಡಬಹುದು. ಇದು ಸಾಂಪ್ರದಾಯಿಕ ಧರ್ಮದ ಶಕ್ತಿಯನ್ನು ಹೆಚ್ಚಿಸಿ, ಕ್ರಮೇಣ ಅನೌಪಚಾರಿಕ ಧರ್ಮವನ್ನು ತನ್ನಲ್ಲಿ ಅರಗಿಸಿಕೊಂಡು ಬಿಡಬಹುದು, ಅನೌಪಚಾರಿಕ ಧರ್ಮದ ವಿವಿಧ ಅಂಶಗಳು ಹಿಂದುಳಿಕೆ, ಮೂಢನಂಬಿಕೆ ಎಂಬ ಆಪಾದನೆಗೆ ಗುರಿಯಾಗಿ ಕ್ರಮೇಣ ಕಲೆಯಾಗುತ್ತವೆ.

## ಪರಾಮರ್ಶನ ಗ್ರಂಥಗಳು

1. Fisher. W B.: The Cambridge History of Iran (London 1968)
2. Frye, Richard, N: Iran-History, Iran-Social life and customs, Iran-Social Conditions, Iran-Politics and Government (New York,1953)
3. George Lenczowski.ed: Iran Under the Pahlavis (California, 1978)
4. Levy . R: The Social Structure of Islam (London, 1962)
5. Leoney. R.E : The Economic Development of Iran (New York, 1973)
6. Namazi. M.B: General Trends in Social Development of Iran, plan organization (Tehran, 1967)
7. Prakash, C. Jain: Demographic Profile of West /Asian and North African Countries (New Delhi, 1994)
8. Rassekh. D and Behnam. D: Introduction to the Sociology of Iran (Tehran, 1985)
9. Redfield, Robert: Peasant Society and Social Structure (NewYork, 1957)
10. Robert. R.Merton: Social Theory and Social Structure(New York,1985)
11. Sir, Percy Sykes: A History of Peria (London, 1921)
12. Sullivan William. H.: Mission to Iran (London, 1981)

13.Rehnema Ali and Nomani Farhad: Religion Politics and Economic policy in iran (London. 1990)

14.Mohammad Reza Pahalavi: The White Revolution (Tehran, 1967)

15.Mohammad Reza Pahalavi: Mission for my Country (Delhi, 1971)

16.ಕನ್ನಡ ವಿಶ್ವಕೋಶ. ಸಂ2 : ಇರಾನ್, (ಮೈಸೂರು 1970)

17.ಮೋಹನ್. ಆರ್ : ಇರಾನ್ (ಮೈಸೂರು 1987)

18.ಡಾ. ಷೇಕ್ ಅಲಿ.ಬಿ : ಡಾ. ಶಿವಣ್ಣ ಕೆ.ಎಸ್. : ಆಧುನಿಕ ಏಷ್ಯಾ (ಮೈಸೂರು 1980)